ವ್ಯತ್ಯಾಸವಿತ್ತೆನ್ನಬಹುದು. ಈ ಎಲ್ಲದರಿಂದ ದೂರವುಳಿಯಲು ಹೆಚ್ಚೆಚ್ಚು ಖಾಸಗಿಯಾಗುವುದೇ ಸರಿಯಾದ ಮಾರ್ಗ ಎಂದು ಯೋಚಿಸಿದ ಅಖ್ತರ ತನ್ನ ಎಲ್ಲ ಡಿಜಿಟಲ್ ಫುಟ್‌ಪ್ರಿಂಟನ್ನು ಅಳಿಸಿಹಾಕುವ ಕೆಲಸವನ್ನು ಪ್ರಾರಂಭಿಸಿದ್ದ.

ಬೇಕಾದಾಗ, ಬೇಕಾದವರಿಗೆ ಒಂದು ದೂರವಾಣಿಯನ್ನೂ ಮಾಡದಿರುವಂತಹ ಸ್ನೇಹ, ನಿಜಕ್ಕೂ ಸ್ನೇಹವೇ?... ವ್ಯಾಪಾರ, ಗ್ರಾಹಕರು ಮತ್ತು ಸಂಬಂಧಗಳು ಮುಖಾಮುಖಿಯಾಗಿ ನಡೆಯುವ ಸಂದರ್ಭದಲ್ಲಿ ಈ ಸಾಮಾಜಿಕ ಜಾಲತಾಣವೇಕೆಂದು ಯೋಚಿಸಿದ. ಭಾರತದಿಂದ ವಾಪಸ್ಸಾದ ನಂತರ ಐದಾರು ವಾರಗಳು ಈ ಯೋಚನೆಗಳಲ್ಲಿಯೇ ಕಳೆಯಿತು. ಕಡೆಗೆ ಒಂದು ದಿನ ಕುಳಿತು ತನ್ನ ಎಲ್ಲ ಸಾಮಾಜಿಕ ಜಾಲತಾಣಗಳ ಸದಸ್ಯತ್ವವನ್ನು ರದ್ದುಗೊಳಿಸಿದ್ದ. ಲಿಂಕ್ಡ್‌ಇನ್, ಫೇಸ್‌ಬುಕ್‌ನಿಂದ ಹೊರಬಂದದ್ದಲ್ಲದೇ ವಾಟ್ಸ್‌ಆ್ಯಪ್ ಗುಂಪುಗಳಿಂದಲೂ ನಿರ್ಗಮಿಸಿದ್ದ. ಈಗವನ ಸಂಪರ್ಕ ಸ್ಕೈಪು, ವಾಟ್ಸ್‌ಆ್ಯಪ್ ಕಾಲ್, ಫೋನು, ಇ–ಮೇಲ್, ಕುರಿಯರ್‌ಗಳ ಮೂಲಕವೇ ಸಾಗುತ್ತಿತ್ತು. ಇದರಿಂದ ಆದ ಒಂದೇ ತೊಂದರೆಯೆಂದರೆ – ಸ್ಥಳೀಯ ಸಮಾಚಾರ ಪತ್ರದಲ್ಲಿ ಬಾರದ ಆದರೆ ಅವನಿಗೆ ಆಸಕ್ತಿಯಿರಬಹುದಾದ ಅನೇಕ ಸುದ್ದಿಗಳು ಅವನಿಗೆ ತಲುಪುತ್ತಿರಲಿಲ್ಲ. ಅದರಿಂದ ದೊಡ್ಡ ನಷ್ಟವಾಗಿದೆಯೆಂದು ಅವನಿಗೇನೂ ಅನ್ನಿಸಿರಲಿಲ್ಲ.

★★★

ಕಾಲೇಜಿನ ದಿನಗಳಲ್ಲಿ ಅವಳಿಜವಳಿಗಳಂತೆ ಯಾವಾಗಲೂ ಅಖ್ತರನ ಜೊತೆಯಲ್ಲಿರುತ್ತಿದ್ದ ಆ ದಿನಗಳನ್ನು ಅನಿರುದ್ಧ ನೆನಪುಮಾಡಿಕೊಂಡ. ಆಗ ಒಂಟಿಕೊಪ್ಪಲಿನ ವೆಂಕಟರಮಣನ ಗುಡಿಗೆ ಪ್ರತಿನಿತ್ಯ ಹೋಗುತ್ತಿದ್ದ ಸುಜಾತಾಳೂ ಅಖ್ತರ–ಅನಿರುದ್ಧರ ಕ್ಲಾಸಿನಲ್ಲಿಯೇ ಇದ್ದಳು. ಗಟ್ಟಿ ಜಡೆ ಕಟ್ಟಿ ಮಲ್ಲಿಗೆ ಹೂವು ಮುಡಿದು ಲಂಗ ಧಾವಣಿಯಲ್ಲಿ ಬರುತ್ತಿದ್ದ – ಒಮ್ಮೊಮ್ಮೆ ಸೀರೆ ತೊಡುತ್ತಿದ್ದ ಸುಜಾತಾಳನ್ನು ಅನಿರುದ್ಧ ಮನಸ್ಸಿನಲ್ಲಿಯೇ ಪ್ರೀತಿಸುತ್ತಿದ್ದ. ಒಮ್ಮೊಮ್ಮೆ ತಾನು ದೇವಸ್ಥಾನಕ್ಕೆ ಹೋಗಲು ಮೂಲಕಾರಣ ವೆಂಕಟರಮಣನೋ ಅಥವಾ ಸುಜಾತಾ ಎನ್ನುವ ಈ ಹುಡುಗಿಯೋ ತಿಳಿಯದೇ ಅವನು ಗೊಂದಲಕ್ಕೀಡಾಗುತ್ತ ಇದ್ದದ್ದೂ ಉಂಟು.

ಸುಜಾತಾಳ ವಿಷಯದಲ್ಲಿ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದ್ದಲ್ಲದೇ ಅನಿರುದ್ಧ ತಾನೂ ತನ್ನ ಕೈಲಾದಷ್ಟು ಪ್ರಯತ್ನವನ್ನು ಮಾಡುತ್ತಿದ್ದ. ಆ ಪ್ರಯತ್ನದ ಭಾಗವಾಗಿ ಗುಡಿಗೆ ಎಂಟ್ರಿ ಕೊಡುವ ಟೈಮಿಂಗನ್ನು ಸುಜಾತಾಳ ಆಗಮನಕ್ಕನುಸಾರವಾಗಿ ಸಿಂಕ್ರನೈಸ್ ಮಾಡುವುದು, ಅವಳು ಬಂದ ಕೂಡಲೇ ತನಗರಿವಿದ್ದ ಸಂಸ್ಕೃತ ಜ್ಞಾನವನ್ನು ಪ್ರದರ್ಶಿಸುವುದು, ಹಣೆಗೆ ಸರಿಯಾದ ಸೈಜಿನಲ್ಲಿ ಕುಂಕುಮ ಹಚ್ಚಿ ಕಾಲೇಜಿಗೆ ಹಾಜರಾಗುವುದು, ಮತ್ತು ಪ್ರದಕ್ಷಿಣೆಯ ನೆಪದಲ್ಲಿ ಸುಜಾತಾಳನ್ನು ಹಿಂಬಾಲಿಸುವುದು. ಹೀಗೆ ಯಥಾವತ್ ತನ್ನ ಪ್ರಯತ್ನವನ್ನು ಅನಿರುದ್ಧ ಮಾಡಿದ್ದನಾದರೂ ಆ ಸೂಪರ್ ವೆಂಕಟೇಶ ಅವನ ಲವ್ವನ್ನು ನಪಾಸು ಮಾಡಿದ್ದ. ಸುಜಾತಾಳ ಬಗೆಗಿನ ಅವನ ಪ್ರೀತಿ ಎಷ್ಟು ನಿಗೂಢವಾಗಿತ್ತೆಂದರೆ, ಯಾರಿಗೂ – ಅಖ್ತರನಿಗೂ, (ಬಹುಶಃ) ಸುಜಾತಳಿಗೂ, ಆ ಬಗ್ಗೆ ಯಾವುದೇ ಸುಳಿವು ಇದ್ದಂತಿರಲಿಲ್ಲ. ಈ ಪ್ರೀತಿ ಅವನ ಮತ್ತು ಲಾರ್ಡ್ ವೆಂಕಟೇಶನ ನಡುವೆ ಮಾತ್ರ ಮಾತಾಗಿದ್ದಂತಿತ್ತು. ಸೂಕ್ಷ್ಮ ಮನಸ್ಸಿನವಳಾಗಿದ್ದರೆ ಸುಜಾತಾಳಿಗೆ ಆ ಬಗ್ಗೆ ಕೆಲವು ಸುಳಿವುಗಳು ಇದ್ದಿರಬಹುದು. ಏನೇ ಆಗಲೀ ಸುಜಾತಾ ಅವನ ಕೈಗೆ ದಕ್ಕಿರಲಿಲ್ಲ. ಅನಿರುದ್ಧ ಮೈಸೂರು ಬಿಡುವುದಕ್ಕೆ ಮುನ್ನವೇ ಸುಜಾತಾಳಿಗೂ ಮದುವೆಯಾಗಿಬಿಟ್ಟಿತ್ತು. ಆದಿನ ಅವನು ಮೊದಲ ಬಾರಿ ವಾಂತಿಯಾಗುವಷ್ಟು ಬಿಯರನ್ನು ಕುಡಿದು, ಮನೆಯಲ್ಲಿ ಚೆನ್ನಾಗಿ ಇಕ್ಕಿಸಿಕೊಂಡಿದ್ದ.

ಅನಿರುದ್ಧನ ಭಕ್ತಿಯ ಬಗೆಗೆ ಅಖ್ತರ್ ಹುಸೇನ್ ಸುಮಾರಷ್ಟು ಬಾರಿ ಪ್ರಶ್ನಿಸಿದ್ದ. ಶ್ರಮವೇ ಇಲ್ಲದೆ ಭಕ್ತಿ ಪ್ರದರ್ಶನವೂ ದೇವರ ವಿಷಯದಲ್ಲಿ ಅವನ ಜೊತೆ ವ್ಯಾಪಾರವೂ ಸಲ್ಲ ಎಂಬುದು ಅಖ್ತರನ